5

# ನಮ್ಮ ದೇವರು ಚಾರಿತ್ರಿಕವಾದಾತನು

ಸೃಷ್ಟಿಕರ್ತನಾಗಿ, ದೇವರು ನಮಗೆ ಜೀವಿಸಲು ನೆಲೆಯನ್ನು ಒದಗಿಸಿಕೊಟ್ಟನು. ನಾವು ಭೂಲೋಕದವರಾಗಿದ್ದೇವೆ. ದೇವರೊಂದಿಗೆ ಒಬ್ಬರೊಬ್ಬರೊಂದಿಗೆ ಹಾಗೂ ನಿಸರ್ಗದೊಂದಿಗೆ ಸಾಮರಸ್ಯದಲ್ಲಿ ನಾವು ಜೀವಿಸಲು ದೇವರು ನಮಗೆ ಆದರ್ಶವಾದ ಸ್ಥಳಗಳನ್ನು ಏರ್ಪಡಿಸಿದನು. ಪಾಪವು ಜಗತಿನೊಳಗೆ ಪ್ರವೇಶಿಸಿದಾಗ ಈ "ಭೂಮಿಯ ಮೇಲೆ ಪರಲೋಕವು" ಅದೃಶ್ಯವಾಯಿತು. ಆ ಮೊದಲಿನ ಮಾನವ ಜೋಡಿಯು ಪಾಪದ ಕಾರಣದಿಂದ ದೇವರಿಂದ ಬೇರೆಯಾಯಿತು. ಅವರಿಗೆ ಜೀವಿತವನ್ನು ಕಠಿಣವಾಗಿ ಮಾಡಿದಂಥ ಕೆಲವು ವಿರೋಧಿ ಸಂಗತಿಗಳನ್ನು ಭೂಮಿಯು ಪ್ರದರ್ಶಿಸಲು ಪ್ರಾರಂಭಿಸಿತು. ಸೈತಾನನು ಮಿತಿಮೀರಿದನು. ದೇವರ ಹಾಗೂ ಸೈತಾನನ ಮಧ್ಯದಲ್ಲಿ ಮಹಾಭಾರಿ ಯುದ್ಧವಾಯಿತು.

ದೇವರು ತನ್ನೊಂದಿಗೆ ಪೂರ್ಣ ಅನ್ಯೋನ್ಯತೆಗೆ ಮಾರ್ಗವನ್ನು ಆಯ್ದುಕೊಳ್ಳಲು ಮಾನವರಿಗೆ ಮಾರ್ಗವನ್ನು ಒದಗಿಸಿದನು. ದುಷ್ಟಪರಿಣಾಮದ ಸಾಧ್ಯತೆ ವಾಸ್ತವಿಕವಾದದ್ದು. ಸಂಬಂಧವು ಅಧಿಕೃತವಾಗಿರಲು ಇದೊಂದೇ ಮಾರ್ಗವಿತ್ತು. ಇಲ್ಲದಿದ್ದರೆ ಅವರಿಗೆ ಇದ್ದ ಆಯ್ಕೆಯ ಸಾಮರ್ಥ್ಯವು ನಿಷ್ಪ್ರಯೋಜಕವಾದದ್ದಾಗುತ್ತಿತ್ತು. ಸಂಬಂಧವು ಯಾಂತ್ರಿಕವಾದದ್ದೂ, ಯಾಂತ್ರಿಕ ಮನುಷ್ಯನಂತಾಗುವಂಥದ್ದೂ ಗುಲಾಮತನದ್ದೂ ಆಗುತ್ತಿತ್ತು. ಆದಾಮ ಮತ್ತು ಹವ್ವರು ಭಯಂಕರವಾದ ತಪ್ಪನ್ನು ಮಾಡಿದರು. ಅವರು ಸ್ವತಂತ್ರವಾಗಿ ತಪ್ಪಾದ ಆಯ್ಕೆ ಮಾಡಿಕೊಂಡರು. ಪರಿಣಾಮಗಳು ಹೊಯ್ದಾಡುವಂಥವುಗಳೂ ಅನೇಕವು ಕೂಡಲೇ ಆದಂಥವುಗಳೂ ಆಗಿದ್ದವು. ಅವರಿಗೆ ದೇವರು ಕೊಟ್ಟ ಜೀವಕೊಡುವ ಆತ್ಮವು ವಿಷ್ಣಕ್ಕೊಳಗಾಯಿತು. ಅವರು ಪಾಪ ಮಾಡಿದ ದಿನವೇ ಅವರು ಆತನಿಂದ ಬೇರ್ಪಡಿಸಲ್ಪಟ್ಟರು. ಮರಣವು ಬೇರ್ಪಡಿಸುವಿಕೆಯಾಗಿದೆ. ಆದಾಮ ಮತ್ತು ಹವ್ವರು ಜೀವವೃಕ್ಷದಿಂದ ದೂರವಿಡಲ್ಪಟ್ಟರು. ಆದುದರಿಂದ ಅವರು ದೈಹಿಕವಾಗಿ ಸಾಯಲು ವಿಧಿಸಲ್ಪಟ್ಟರು.

"ಅದು ಭಯಂಕರವಾಗಿರುತ್ತದೆ!" ಎಂದು ನಾವು ಹೇಳುತ್ತೇವೆ. ಅವರೊಂದಿಗೆ ನಾವು ಹೇಗೆ ಸಹಾನುಭೂತಿ ತೋರಿಸುತ್ತೇವೆ. ಹಾಗಿದ್ದರೂ, ಇದು ಕಥೆಯ ಅಂತ್ಯವೆಂದು ನಾವು ತಿಳಿದುಕೊಳ್ಳಬಾರದು. ಅವರ ಪಾಪದ ಪರಿಣಾಮಗಳು ಕೇವಲ ವೈಯಕ್ತಿಕವಾದವುಗಳಾಗಿದ್ದರೂ ಅವುಗಳ ಪರಿಣಾಮ ವಿಶಾಲವಾಗಿತ್ತು. ಶಾಂತವಾದ ಕೆರೆಯ ನೀರೊಳಗೆ ಕಲ್ಲೆಸೆದಾಗ ತೆರೆಗಳು ದಡವನ್ನು ತಲುಪುವಂತೆ ಅವರ ಪಾಪದ ಪರಿಣಾಮಗಳು ನಮ್ಮ ಜೀವಿತಗಳನ್ನು ತಲುಪುತ್ತವೆ. ಪಾಪ, ಖಂಡನೆ ಹಾಗೂ ಮರಣ ಎಲ್ಲರಿಗೂ ಹಬ್ಬಿಕೊಳ್ಳುತ್ತವೆ. "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ" (ರೋಮಾಪುರ 3:23). "ಆದುದರಿಂದ, ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಪ್ರವೇಶಿಸಿದ ಹಾಗೆಯೇಣಿ ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಎಲ್ಲರಿಗೂ ವ್ಯಾಪಿಸಿತು" (ರೋಮಾಪುರ 5:12). "ಹೀಗೆ ಒಂದೇ ಅಪರಾಧದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಉಂಟಾಯಿತು" (ರೋಮಾಪುರ 5:18ಎ). ನಾವು ಸಹ ಲೆಕ್ಕಾಕೊಡಬೇಕಾದ ಜೀವಿಗಳಾಗಿ "ತೋಟದ ಹೊರಗೆ" ನಿಂತುಕೊಳ್ಳಬೇಕು. ಅವರ ಬಿದ್ದುಹೋಗುವಿಕೆಯು ನಮ್ಮ

ಬಿದ್ದುಹೋಗುವಿಕೆಗೆ ನಡಿಸಿತು, ದೇವರಿಂದ ಅವರು ಬೇರೆ ಯಾದದ್ದು ನಾವು ದೇವರಿಂದ ಬೇರೆಯಾಗುವದಕ್ಕೆ ಕಾರಣವಾಯಿತು. ನಾವು ದೇವರ ಮುಂದೆ ನಿಂತುಕೊಂಡು ಪುರಾತನ ಕಾಲದ ಯೆಶಾಯನೊಂದಿಗೆ, "ಅಯ್ಯೋ, ನನ್ನ ಗತಿಯನ್ನು ಏನು ಹೇಳಲಿ! ನಾಶವಾದೆನಲ್ಲಾ" ಎಂದು ನಾವು ಸಹ ಕೂಗುತ್ತೇವೆ (ಯೆಶಾಯ 6:5ಎ).

ನಾವು ನಿರಾಶೆಯುಳ್ಳವರಾಗಿರುವೆವೋ? ಸೈತಾನನ ಭಯಾನಕವಾದ ಸುಪ್ರಸಿದ್ಧ ವಸ್ತು ಸಂಗ್ರಹಾಲಯದಲ್ಲಿ ಅವನ ಪ್ರದರ್ಶನದ ವಸ್ತುಗಳಾಗಿ ನಾವು ದಂಡಿಸಲ್ಪಟ್ಟಿರುವೆವೋ? ದೇವರೊಂದಿಗೆ ನಿತ್ಯತ್ವದ ಅನ್ಯೋನ್ಯತೆಯಲ್ಲಿರಲು ಶಕ್ತರಾದ ಜೀವಿಗಳನ್ನು ನಿರ್ಮಿಸುವ ಆತನ ಪ್ರಯತ್ನದಲ್ಲಿ ಆತನ ಸೋಲುವಿಕೆಯ ರುಜುವಾತಾಗಿದ್ದೇವೆಯೇ? ಈ ಪ್ರಶ್ನೆಗಳಿಗೆ ನಾವು ದೃಢವಾದ "ಇಲ್ಲ!" ಎಂಬ ಉತ್ತರ ಕೊಡಬೇಕು. ನಾವು ನಿರಾಶರಾಗಬಾರದು. ಯಾಕಂದರೆ ದೇವರು ನಮ್ಮನ್ನು ಬಿಟ್ಟು ಕೊಟ್ಟಿರುವದಿಲ್ಲ. ನಾವು ನಿಜವಾಗಿಯೂ ದೇವರ ಜಯವನ್ನು ಸ್ಥಾಪಿಸಬಹುದು ಹಾಗೂ ಸೋಲಿನ ಯಾವುದೇ ಯೋಚನೆಯನ್ನು ತಳ್ಳಿಹಾಕಬಹುದು. ಇವು ಪ್ರೋತ್ಸಾಹಿಸುವ ಪದಗಳಾಗಿವೆ. ಆದರೆ ಅವುಗಳಿಗೆ ಸತ್ವವಿರುವುದೋ? ಇದು ಕೇವಲ ಆಶಾಭಾವನೆಯ ಆಲೋಚನೆಯಾಗಿರುವದಿಲ್ಲ ಎಂಬುದಕ್ಕೆ ನಮಗೆ ಯಾವ ಭರವಸೆ ಇರುತ್ತದೆ? ಕೇಂದ್ರೀಕರಿಸುವಲ್ಲಿ ಭಿನ್ನವಾಗಿ ರುವಂಥದ್ದು ಉತ್ತರಕ್ಕೆ ಬೇಕಾಗುತ್ತದೆ. ಉತ್ತರವು ದೇವರಿಂದ ಬರತಕ್ಕದ್ದು, ನಮ್ಮಿಂದ ಅಲ್ಲ.

ಹಿಂದಿನ ಪಾಠದಲ್ಲಿ ದೇವರು ಸೃಷ್ಟಿಸಿದ ಕಾರ್ಯವನ್ನು ನೋಡಿದ್ದೇವೆ. ಆತನ ಪ್ರತಿಭೆಯು, ಪ್ರಸನ್ನತೆಯು ಮತ್ತು ಬಲವು ಪ್ರಕಟಿಸಲ್ಪಟ್ಟದ್ದನ್ನು ನೋಡಿದ್ದೇವೆ. ಇದೆಲ್ಲವನ್ನೂ ನಾವು ಆತನ ಸೃಷ್ಟಿಸುವ ಕಾರ್ಯದಲ್ಲಿ ನೋಡಿದ್ದೇವೆ. ಇದಲ್ಲದೇ ಈ ಅನ್ಯೋನ್ಯತೆಗೆ ಹಿನ್ನೆಲೆಯಾಗಿ "ಭೂಮಿಯ ಮೇಲೆ ಪರಲೋಕವನ್ನು" ನೋಡಿದ್ದೇವೆ. ಪ್ರತಿಯೊಂದು ಸೋಲಿನಲ್ಲಿ ಅಂತ್ಯವಾಯಿತೆಂದು ತೀರ್ಮಾನಿಸುವುದು ದು ಖಕರವಾದ ತಪ್ಪಾಗುತ್ತದೆ. ನಿರ್ಣಾಯಕವಾದ ಒಂದು ಸಂಗತಿಯನ್ನು ನಾವು ಅಲಕ್ಷಿಸುತ್ತಿದ್ದೇವೆ: ದೇವರು ಕೇವಲ ಸೃಷ್ಟಿಸುವಾತನು ಮಾತ್ರವೇ ಆಗಿರದೇ, ಐತಿಹಾಸಿಕವಾದವನೂ ಆಗಿದ್ದಾನೆ. ಚರಿತ್ರೆಯಲ್ಲಿ ಆತನ ಕಾರ್ಯವೂ, ಸೃಷ್ಟಿಯಲ್ಲಿಯ ಆತನ ಕಾರ್ಯವೂ ನಮಗೆ ಅಷ್ಟೇ ಮಹತ್ವದ್ದಾಗಿದೆ. ಆತನೊಂದಿಗೆ ನಮ್ಮ ನಿತ್ಯಜೀವಕ್ಕಾಗಿ ಇವೆರಡೂ ಅತ್ಯವಶ್ಯವಾದವುಗಳಾಗಿವೆ. ಮೊದಲನಯದು, ಆತನು ನಮ್ಮನ್ನು ಸೃಷ್ಟಿಸಿರದಿದ್ದರೆ, ನಾವು ಅಸ್ತಿತ್ವದಲ್ಲಿರುತ್ತಿರಲಿಲ್ಲ. ಎರಡನೆಯದು, ಆತನು ತನ್ನ ಸೃಷ್ಟಿಯ ಇತಿಹಾಸದಲ್ಲಿ ಕಾರ್ಯನಿರತನಾಗಿರದಿದ್ದರೆ ನಾವು ನಾಶವಾಗಿ ಹೋಗುತ್ತೇವೆ.

ದೇವರು ಚರಿತ್ರೆಯಲ್ಲಿ ಕಾರ್ಯಮಾಡುತ್ತಿರುವನೆಂದು ನಾವು ಹೇಗೆ ತಿಳಿಯುತ್ತೇವೆ? ಸೃಷ್ಟಿಯಲ್ಲಿ ಆತನ ಕಾರ್ಯವನ್ನು ತಿಳಿಯುವಂತೆಯೇ ನಾವು ತಿಳಿದಿರುವೆವು. ಸೃಷ್ಟಿಯು ಆತನ ಕೈಕೆಲಸವನ್ನು ಪ್ರಕಟಿಸುತ್ತದೆ. ಚರಿತ್ರೆಯು ಆತನು ಒಳಗೊಂಡಿರುವದನ್ನು ಪ್ರಕಟಿಸುತ್ತದೆ. ದೇವರ ಸೃಷ್ಟಿಸುವ ಕಾರ್ಯವೂ ಆತನ ಐತಿಹಾಸಿಕ ಕಾರ್ಯವೂ ಬೈಬಲಿನಲ್ಲಿ ವಿವರಿಸಲ್ಪಟ್ಟಿದೆ.

## ದೇವರು ಚರಿತ್ರೆಯ ಹೊರಗೆ

ದೇವರು ಬಗೆಗಿನ ಐತಿಹಾಸಿಕ ನೋಟಕ್ಕಿಂತ ಹೆಚ್ಚಾಗಿ ಬೈಬಲಿಗೆ ಮೂಲವಾದದ್ದು ಬೇರೆ ಯಾವುದೂ ಇಲ್ಲ. ಸಮಯದಲ್ಲಿಯಂತೆಯೇ ದೇವರು ನಿತ್ಯತ್ವದಲ್ಲಿ ವಾಸಿ ಸುತ್ತಾನೆ. ಸಮಯವನ್ನು ನಿಲ್ಲದ ಸಮುದ್ರದಲ್ಲಿಯ ಜಲಾಂತರ್ಗಾಮಿ ಹಡಗಿನಂತೆ ದೃಷ್ಟಿಸೋಣ. ನಾವು ಜಲಾಂತರ್ಗಾಮಿ ಹಡಗಿನಲ್ಲಿ ವಾಸಿಸುತ್ತೇವೆ. ಹಡಗಿನೊಳಗೆ ಈಗ

ನಾವು ಸ್ಥಳಕ್ಕೆ ಮಿತಿಗೊಳಿಸಲ್ಪಟ್ಟಿದ್ದೇವೆ. ಹಡಗಿನೊಳಗೆ ಚರಿತ್ರೆಯು ಅಭಿನಯಿಸಲ್ಪಟ್ಟಿದೆ. ಹಾಗಿದ್ದರೂ ದೇವರು ಜಲಾಂತರ್ಗಾಮಿಯಲ್ಲಿ (ಸಮಯದಲ್ಲಿ) ಇರುವದಷ್ಟೇ ಅಲ್ಲದೆ ಆತನು ಸಮುದ್ರದಲ್ಲಿಯೂ (ನಿತ್ಯತ್ವದಲ್ಲಿ) ಇರುವನು. ಜಲಾಂತರ್ಗಾಮಿ ಹಡಗಿನಲ್ಲಿಯ ಆತನ ಕಾರ್ಯಗಳು ಸಮುದ್ರದೊಳಗಿನ ಆತನ ದೃಷ್ಟಿಕೋನಗಳು ತೆಗೆದು ಕೊಳ್ಳಲ್ಪಟ್ಟಿವೆ. ನಮಗಾಗಿ ಇದರಲ್ಲಿ ಬಹಳ ಅನ್ವಯಗಳಿರುತ್ತವೆ.

ಮೊದಲನೆಯದು, ನಮಗೆ ಆತನ ದೃಷ್ಟಿಕೋನವಿಲ್ಲದೇ ಇರುವದರಿಂದ ನಾವು ಆತನ ಕಾರ್ಯಗಳನ್ನು ಯಾವಾಗಲೂ ಅರ್ಥಮಾಡಿಕೊಳ್ಳುವದಿಲ್ಲ ಇಲ್ಲವೇ ನೋಡುವದಿಲ್ಲ. ಎರಡನೆಯದು, ಸೃಷ್ಟಿಯಲ್ಲಿ ಆತನ ಕಾರ್ಯವು ಪೂರ್ತಿಯಾಗಿ ಉತ್ಪತ್ತಿಯಾದದ್ದರಲ್ಲಿ ಕಾಣಲ್ಪಡುವಂತೆ, ಆತನು ಹಡಗನ್ನು ನಡಿಸುವ ವಿಧಾನದಿಂದ ಚರಿತ್ರೆಯಲ್ಲಿ ಆತನ ಪ್ರಸನ್ನತೆಯನ್ನು ನೋಡಬಹುದು (ಕೀರ್ತನೆ 19:1). ಮೂರನೆಯದು, ಸಾಮಾನ್ಯ ಪ್ರಕಟನೆ (ನಿಸರ್ಗ) ಹಾಗೂ ವಿಶೇಷ ಪ್ರಕಟಣೆ (ಬೈಬಲ್) ಎರಡರಲ್ಲಿಯೂ ದೇವರ ಸೃಷ್ಟಿಯ ಕಾರ್ಯವನ್ನು ನಾವು ನೋಡುವಂತೆ ಆತನ ಐತಿಹಾಸಿಕ ಕಾರ್ಯವನ್ನೂ ನೋಡುತ್ತೇವೆ. ಸಾಮಾನ್ಯ ಚರಿತ್ರೆಯಲ್ಲಿ ಆತನ ಕಾರ್ಯವನ್ನು ಗುರಿತಿಸಲು ನಮಗೆ ಕಷ್ಟವಾಗಬಹುದು. ಆದರೆ ಆತನು ಆಯ್ದುಕೊಂಡ ಜನಾಂಗದೊಂದಿಗೆ ಆತನ ವ್ಯವಹಾರಗಳಲ್ಲಿ ಬೈಬಲಿನ ವಿವರಣೆಗಳಲ್ಲಿ ಅದು ಸ್ಪಷ್ಟವಾಗಿ ತೋರಿಸಲ್ಪಟ್ಟಿದೆ. ಆದುದರಿಂದ, ದೇವರು ಐತಿಹಾಸಿಕ ವಾಗಿ ಕಾರ್ಯ ನಿರತನಾಗಿರುವಂತೆ ವಿವರಿಸಲು ಬೈಬಲಿನ ಕಡೆಗೆ ತಿರುಗಿಕೊಳ್ಳುವೆವು.

## ದೇವರು ಚರಿತ್ರೆಯೊಳಗೆ

ಬೈಬಲಿನಲ್ಲಿ ನಾವು ಆಶ್ಚರ್ಯಕರವಾದದ್ದನ್ನು ಕಂಡುಕೊಳ್ಳುತ್ತೇವೆ. ಚರಿತ್ರೆಯು ಕ್ರಮಾನುಗತಿಯ ಘಟನೆಗಳ ದಾಖಲೆಗಿಂಥ ಹೆಚ್ಚಾದದ್ದಾಗಿದೆ ಎಂದು ನಾವು ಕಂಡು ಕೊಂಡಿದ್ದೇವೆ. ಅಲ್ಲಿ ಉದ್ದೇಶಗಳ ಅರ್ಥವಿದೆ. ನಮಗಾಗಿರುವ ದೇವರ ಸನ್ನಿವೇಶವು ನಮಗೆ ಸೃಷ್ಟಿ ಮೊದಲ ಸನ್ನಿವೇಶವಾಗಿದೆ. ಈಗ ಅದು ಐತಿಹಾಸಿಕ ಸನ್ನಿವೇಶವಾ ಗಿದೆ. ಮೊದಲನೆಯ ಸನ್ನಿವೇಶವು ಪಾಪದಿಂದ ಕೆಡಿಸಲ್ಪಟ್ಟರೂ ದೇವರು ನಮ್ಮನ್ನು ಬಿಟ್ಟುಕೊಡುವದಿಲ್ಲ. ಎರಡನೆಯ ಸನ್ನಿವೇಶವು ಪಾಪದಿಂದ ತಪ್ಪಿಸಿಕೊಳ್ಳುವ ಅವಕಾಶವನ್ನು ನಮಗೆ ಕೊಡುತ್ತದೆ. ಆದುದರಿಂದ ಇತಿಹಾಸವು "ರಕ್ಷಣೆಯ ಇತಿಹಾಸ" ಎಂದು ಕರೆಯಲ್ಪಟ್ಟಿದೆ.[1] ಇತಿಹಾಸದಲ್ಲಿ ಪ್ರತಿಯೊಂದೂ ರಕ್ಷಿಸಲ್ಪಡುವದೆಂದು ಅರ್ಥ ವಾಗುವದಿಲ್ಲ. ಆದರೆ ಚರಿತ್ರೆಯೊಳಗೆ ರಕ್ಷಿಸುವ ಉದ್ದೇಶವು ದೇವರಿಗೆ ಇದೆ.

ರಕ್ಷಿಸುವ ಈ ಉದ್ದೇಶವು ಕೆಲವು ಸಲ ಚರಿತ್ರೆಯಲ್ಲಿ ದೇವರು ತನ್ನ ಶ್ರೇಷ್ಠವಾದ ಯೋಜನೆ ಯನ್ನು ನೆರವೇರಿಸಲು ಜನರನ್ನು ನಡಿಸುವುದಾಗಿದೆ ಎಂಬುದು ಗಮನಿಸಲ್ಪಟ್ಟಿದೆ. ತನ್ನನ್ನೂ ತನ್ನ ಕುಟುಂಬವನ್ನೂ ಎಲ್ಲಾ ಜೀವಿಸುವ ಜೀವಿಗಳ ಜಾತಿಗಳನ್ನೂ ರಕ್ಷಿಸಲು ನಾವೆ ಕಟ್ಟಬೇಕೆಂದು ದೇವರು ನೋಹನಿಗೆ ಆಜ್ಞಾಪಿಸಿದನು. ಇದು ನಿಶ್ಚಯವಾಗಿಯೂ ನೋಹನಿಗೂ ಅವನ ಕುಟುಂಬಕ್ಕೂ ಶುಭಸಮಾಚಾರವಾಗಿತ್ತು. ಆದರೆ ಅದು ಮಾನವ ಕುಲಕ್ಕೆ ಇನ್ನೂ ಹೆಚ್ಚು ಉತ್ತಮವಾದ ಸಮಾಚಾರವಾಗಿತ್ತು. ದುಷ್ಟತನವು ಶುದ್ಧೀಕ ರಿಸಲ್ಪಟ್ಟಿತು, ಮತ್ತು ಜೀವವು ಉಳಿಸಲ್ಪಟ್ಟಿತು (ಆದಿಕಾಂಡ 6:1-9:17). ದೇವರು ನೋಹ ನನ್ನು ಉಳಿಸಿದನು, ಆದರೆ ದೇವರಲ್ಲಿ ಇನ್ನೂ ಹೆಚ್ಚು ದೊಡ್ಡದಾದ ಯೋಜನೆಗಳಿತ್ತು.

ಅಬ್ರಹಾಮನಿಗೆ ತನ್ನ ಮನೆಯನ್ನು ತನ್ನ ಜನಾಂಗವನ್ನು ಬಿಟ್ಟು ಅವನು ಅರಿಯದೇ ಇದ್ದಂಥ ದೇಶಕ್ಕೆ ಪ್ರಯಾಣ ಮಾಡಬೇಕೆಂದು ದೇವರು ಆಜ್ಞಾಪಿಸಿದನು. ಅಸಾಮಾನ್ಯ ವಾದದ್ದನ್ನು ಮಾಡಲು ದೇವರು ಈ ಮನುಷ್ಯನಿಗೆ ಯಾಕೆ ಆಜ್ಞಾಪಿಸಿದನು? "ಉನ್ನತಿಗೇರಿಸಲ್ಪಟ್ಟ ತಂದೆ" ಎಂಬ ಅರ್ಥವುಳ್ಳ ಹೆಸರಿನ ಅಬ್ರಾಮನು "ಸಮೂಹಗಳ

ತಂದೆ" ಅಬ್ರಹಾಮ ಎಂದಾಗ ಬೇಕು ಹಾಗೂ ಅವನ ಮೂಲಕ ಭೂಲೋಕದ *ಎಲ್ಲಾ ಜನಾಂಗಗಳೂ* ಆಶೀರ್ವದಿಸಲ್ಪಡಬೇಕು ಎಂಬುದು ದೇವರ ಯೋಜನೆಯಾಗಿತ್ತು. ಅಬ್ರಹಾಮನು ಇಬ್ರಿಯನಾದನು, ಇಬ್ರಿಯ ಜನಾಂಗದ ತಂದೆಯಾದನು (ಆದಿಕಾಂಡ 12:1-4ಣೆ 14:13ಣೆ ಯೆಶಾಯ 41:8). ಅನಂತರದಲ್ಲಿ ಮೆಸ್ಸೀಯನಾದ ಯೇಸುವಿಗೆ (*yeshua hammashiach*) ಸಮರ್ಪಿಸಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯೂ ಅಬ್ರಹಾಮನ ವಂಶಜನಾಗುವನು (ಗಲಾತ್ಯ 3:26-29). ಚರಿತ್ರೆಯ ಸರಣಿಯು ದೇವರ ಹಸ್ತಗಳಲ್ಲಿದೆ.

ಅಬ್ರಹಾಮನ ಮೊಮ್ಮಗ ಯೋಸೇಫನು ವಿಶೇಷ ಘಟನೆಗಳುಳ್ಳ, ಮುಂತಿಳಿಸಲ್ಪಡದಂಥ ಜೀವನ ಜೀವಿಸಿದನು. ಕಾನಾನಿನಲ್ಲಿಯ ಸಂಚಾರಿ ಜನರ ನಾಯಕನ ಮಗನು ಫರೋಹನ ಸೈನ್ಯದ ಸೇನಾಪತಿಯ ಮನೆಯಲ್ಲಿ ಗುಲಾಮನಾಗಿರುವನೆಂಬುದನ್ನು ಯಾರು ಯೋಚಿಸಿದ್ದರು? ಈ ಇಬ್ರಿಯ ಗುಲಾಮನು ಅವಮಾನ ಪಡಿಸಲ್ಪಡುವನು, ಸೆರೆಮನೆಗೆ ಹಾಕಲ್ಪಡುವನು ಆ ಮೇಲೆ ಐಗುಪ್ತದಲ್ಲೆಲ್ಲಾ ಫರೋಹನ ನಂತರವಿರುವ ಅತ್ಯುನ್ನತ ಹುದ್ದೆಯಲ್ಲಿ ಗೌರವಿಸಲ್ಪಡುವನು ಎಂಬುದನ್ನು ಯಾರು ನಿರೀಕ್ಷಿಸಿ ಮುಂದಾಗಿ ನೋಡಿದ್ದರು? ಅಂತಿಮವಾಗಿ ದೇವರ ಜನಾಂಗವಾದ ಇಸ್ರಾಯೇಲನ್ನು ಕಾಪಾಡಿ ಉಳಿಸುವದನ್ನು ಯೋಸೇಫನು ಮಾಡುವನೆಂದು ಯಾರಾದರೂ ಮುಂತಿಳಿಸಬಹುದಿತ್ತೋ?

ದೇವರು ಚರಿತ್ರೆಯಲ್ಲಿ ಕಾರ್ಯಮಾಡುವಂಥದ್ದನ್ನು ಸಾಮಾನ್ಯವಾಗಿ ನೋಡಲಿಕ್ಕೆ ಅಸಾಧ್ಯವಾದದ್ದಾಗಿದೆ. ಹಾಗಿದ್ದರೂ ಆತನ ಅನುಗ್ರಹ ಕಾರ್ಯವನ್ನು ನಾವು ನೋಡದಿರುವ ಕಾರಣದಿಂದ ಅದು ಕಾರ್ಯಮಾಡಿತ್ತಿರುವದಿಲ್ಲ ಎಂದರ್ಥವಾಗುವದಿಲ್ಲ. ಯೋಸೇಫನ ಜೀವನದ ದೇವರ ನಿರ್ದೇಶನವು ಯೋಸೇಫನನ್ನು ರಕ್ಷಿಸುವದಕ್ಕಿಂತ ಹೆಚ್ಚು ದೊಡ್ಡ ಉದ್ದೇಶಕ್ಕಾಗಿತ್ತು (ಆದಿಕಾಂಡ 45:4-15). ಅದು ಆತನ ಜನಾಂಗವನ್ನು ಕಾಯ್ದಿರಿಸಿ ಬೆಳಿಸುವದಕ್ಕಾಗಿತ್ತು!

ಐಗುಪ್ತದ ಶಕ್ತಿಯುತವಾದ ಬಲವು ಗ್ರಹಿಸಲು ಸಾಧ್ಯವಿಲ್ಲದ ಘಟನೆಗಳಿಂದ ಏನೂ ಇಲ್ಲದಾಗಿ ಮಾಡಲ್ಪಟ್ಟಿತು. ಇಬ್ರಿಯ ಶಿಶುವಾದ ಮೋಶೆಯು ತನ್ನ ಜನನದ ಸಮಯದಲ್ಲಿ ಮರಣ ದಂಡನೆಯಲ್ಲಿ ಇದ್ದನು. ಜನಿಸುವ ಪ್ರತಿಯೊಂದು ಇಬ್ರಿಯ ಗಂಡು ಮಗುವು ಈ ಶಿಕ್ಷೆಯಲ್ಲಿತ್ತು. ನೈಲನದಿಯಲ್ಲಿ ಫರೋಹನ ಕುಮಾರ್ತೆಯಿಂದ ಕಂಡುಕೊಳ್ಳಲ್ಪಡುವ ಆಕಸ್ಮಿಕತೆಯಿಂದ ಮೋಶೆಯು ಮರಣವನ್ನು ತಪ್ಪಿಸಿಕೊಂಡನು. ಇಬ್ರಿಯ ಗುಲಾಮರ ಈ ಮಗನು ಅರಸನ ಮನೆಯಲ್ಲಿ ಬೆಳಿಸಲ್ಪಟ್ಟನು. ಯೆಹೂದಿ ಚರಿತ್ರೆಕಾರ ಜೋಸಿಪಸ್ ಹಾಗೂ ಕ್ರೈಸ್ತ ಲೇಖಕ ಟೆರ್ಟುಲ್ಲಿಯನ್[2] ಇಬ್ಬರೂ ಮೋಶೆಯ ಬಗ್ಗೆ ಬರೆದಿದ್ದಾರೆ. ಮೋಶೆಯು ಐಗುಪ್ತದ ಸೈನ್ಯದಲ್ಲಿ ಮಹಾ ನಾಯಕನಾಗಿದ್ದನು ಮತ್ತು ಐತಿಯೋಪ್ಯದವರ ಮೇಲೆ ಅವರ ಸೈನ್ಯ ಜಯಸಾಧಿಸಿತೆಂದು ಅವರು ಒಪ್ಪಿಕೊಂಡಿದ್ದಾರೆ.[3] ಅನಂತರ ಸಿನಾಯಿ ನಾಡಿನಲ್ಲಿ ಮೋಶೆಯು ಓಡಿಹೋದನು. ಎಂಭತ್ತು ವರ್ಷದವನಾಗುವವರೆಗೆ ಜಗತ್ತಿನ ಆಗುಹೋಗುಗಳಿಂದ ಪ್ರತ್ಯೇಕವಾಗಿ ದೂರದಲ್ಲಿ ಉಳಿದು ಕೊಂಡನು.

ತನ್ನ ಜನಾಂಗವನ್ನು ಐಗುಪ್ತ ದೇಶದೊಳಗಿಂದ ಸ್ವಾತಂತ್ರಕ್ಕೆ ತರಬೇಕೆಂದು ಅರಣ್ಯದಲ್ಲಿ ಮೋಶೆಯು ದೇವರಿಂದ ನಿರ್ದೇಶನವನ್ನು ಹೊಂದಿದನು. ಒಬ್ಬ ಕುರುಬನು ತಾನು ಹೇಳಿದಂತೆ - ಐಗುಪ್ತದ ಫರೋಹನು ಕೇಳಬೇಕೆಂಬುದನ್ನು ಕಲ್ಪಿಸಿಕೊಳ್ಳಿರಿ. ಫರೋಹನು ತನ್ನ ಗುಲಾಮರ ಸಮೂಹವನ್ನು ಬಿಟ್ಟುಕೊಡುವದನ್ನು ಹಟಮಾರಿತನದಿಂದ ನಿರಾಕರಿಸಿದನು. ಹಾಗಿದ್ದರೂ ದೇಶದಲ್ಲಿ ಬಹಳ ಕಷ್ಟ ಮತ್ತು ಗಲಿಬಿಲಿಯಾಗುವಾಗ - ಐಗುಪ್ತ್ಯರ ಪ್ರತಿಯೊಂದು ಮನೆಯಲ್ಲಿ ಶೋಕವಾದಾಗ - ಆವನು ಒಪ್ಪಿಕೊಂಡನು.

ಗುಲಾಮರಾಗಿದ್ದ ಇಬ್ರಿಯರು ಐಗುಪ್ತನ್ನು ಬಿಟ್ಟು, ಸಿನಾಯಿ ಬೆಟ್ಟದ ಬಳಿಯಲ್ಲಿ ಸ್ವತಂತ್ರ ಜನಾಂಗವಾದರು. ಚರಿತ್ರೆಯ ಮಾರ್ಗವು ಬದಲಾಯಿತು. ಪುನ ಐತಿಹಾಸಿಕ ದೇವರು ತನ್ನ ಬಲವನ್ನೂ ಅನುಗ್ರಹ ಕಾರ್ಯವನ್ನೂ ಪ್ರದರ್ಶಿಸಿದನು (ವಿಮೋಚನಕಾಂಡ 3-20).

ಕರ್ತನ ಕೃತ್ಯಗಳು ಮಹತ್ತಾದವುಗಳುಣಿ
ಅವುಗಳಲ್ಲಿ ಸಂತೋಷಿಸುವವರು ಅವುಗಳನ್ನೆ ಧ್ಯಾನಿಸುವರು.
ಆತನ ಕಾರ್ಯವು ಘನಮಾನಗಳುಳ್ಳದ್ದುಣಿ
ಆತನ ನೀತಿಯು ಸದಾಕಾಲವೂ ಇರುವುದು.
ಆತನು ತನ್ನ ಅದ್ಭುತಕೃತ್ಯಗಳ ಜ್ಞಾಪಕವನ್ನು ಉಳಿಯ ಮಾಡಿದ್ದಾನೆ.
ಕರ್ತನು ದಯೆಯೂ ಕನಿಕರವೂ ಉಳ್ಳವನು.
ತನ್ನಲ್ಲಿ ಭಯಭಕ್ತಿಯುಳ್ಳವರಿಗೆ ಆಹಾರವನ್ನು ಕೊಟ್ಟಿದ್ದಾನೆಣಿ
ತನ್ನ ಒಡಂಬಡಿಕೆಯನ್ನು ಯಾವಾಗಲೂ ನೆನಪಿನಲ್ಲಿಡುವನು.
ಆತನು ಅನ್ಯ ಜನಗಳ ಸ್ವಾಸ್ತ್ಯವನ್ನು ತನ್ನ ಪ್ರಜೆಗೆ ಕೊಡುವದರ ಮೂಲಕ
ತನ್ನ ಕಾರ್ಯಗಳ ಬಲವನ್ನು ತೋರ್ಪಡಿಸಿದ್ದಾನೆ.

ಆತನ ಕೈಕೆಲಸಗಳು ನೀತಿಸತ್ಯತೆಗಳನ್ನು ಪ್ರಕಟಿಸುತ್ತವೆಣಿ
ಆತನ ನಿಯಮಗಳೆಲ್ಲ ಸ್ಥಿರವಾಗಿವೆ. ...
ಆತನು ತನ್ನ ಜನರಿಗೆ ವಿಮೋಚನೆಯನ್ನು ಉಂಟು ಮಾಡಿದ್ದಾನೆಣಿ
ತನ್ನ ಒಡಂಬಡಿಕೆಯನ್ನು ನಿತ್ಯಕ್ಕೂ ಸ್ಥಾಪಿಸಿದ್ದಾನೆಣಿ
ಆತನ ನಾಮವು ಪರಿಶುದ್ಧವೂ ಭಯಂಕರವೂ ಆಗಿದೆ (ಕೀರ್ತನೆ 111:2-9).

ಟಿಪ್ಪಣಿಗಳು

[1]Heinz Zahrnt, *The Question of God* (New York: Harcourt Brace Jovanovich, 1969), 287. [2]ಟೆರ್ಟುಲ್ಲಿಯನ್‌ಯ ಲಾಟಿನ್ ಭಾಷೆಯಲ್ಲಿ ಪ್ರಥಮ ಪ್ರಮುಖ ಕ್ರೈಸ್ತ ಬರಹಗಾರರಲ್ಲಿ ಒಬ್ಬನಾಗಿದ್ದಾನೆ. ಕ್ರಿ.ಶ. ಎರಡನೆಯ ಶತಮಾನದ ಅಂತ್ಯದಲ್ಲಿ ಮೂರನೇ ಶತಮಾನದ ಪ್ರಾರಂಭದಲ್ಲಿ ಇದ್ದನು. [3]Josephus *Antiquities* 2.10 ಹಾಗೂ ಅಡಿ ಟಿಪ್ಪಣಿಗಳು.